**OPEN ACCESS**

Volume: 12

Special Issue: 1

Month: October

Year: 2024

E-ISSN: 2582-0397

P-ISSN: 2321-788X

Impact Factor: 3.025

Citation:
ಶಿವಕುಮಾರ ಡಿ. ಸಿ.ಶವ◌ೇತಾ ಎಂ. “ಕನನಡ ಮಹಿಳಾ ಕಥಾ ಸಾಹಿತಯದಲಲಿ ಕೌಟುಂಬಿಕ ಸ ಮಸಯೆಗಳುಹಾಗೂ ಮಹಿಳೆ.” *Shanlax International Journal of Arts, Science and Humanities*, vol. 12, no. S1, 2024, pp. 211–14.

DOI:
https://doi.org/10.34293/sijash.v12iS1-Oct.8306

# ಕನ್ನಡ ಮಹಿಳಾ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಸಮಸ್ಯೆಗಳುಹಾಗೂ ಮಹಿಳೆ

**ಡಾ. ಶಿವಕುಮಾರ. ಡಿ. ಸಿ.**
ಸಹಪ್ರಾಧ್ಯಾಪಕರು
ಕನ್ನಡ ವಿಭಾಗ, ಜೈನ್ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ

**ಶ್ವೇತಾ ಎಂ.**
**ಸಹಾಯಕಪ್ರಾಧ್ಯಾಪಕರು**
**ಕನ್ನಡ ವಿಭಾಗ, ವಿ.ವಿ.ಎಸ್.ಪ್ರಥಮ ದರ್ಜೆ ಕಾಲೇಜು**

## ಪ್ರಸ್ತಾವನೆ

ಮಹಿಳೆಯರು ಒಳಗಿನಿಂದ ಕಾಣಬಹುದಾದ ಕೌಟುಂಬಿಕ ಸೂಕ್ಷ್ಮಗಳು, ವಿವರಗಳು, ವೈಪರೀತ್ಯಗಳು, ಸುಖದುಃಖಗಳು ಸಹಜವಾಗಿ ಇವರ ಕಥೆಗಳಲ್ಲಿ ಪಡಿಮೂಡಿವೆ. ಅನೇಕ ಲೇಖಕಿಯರು ಉತ್ತಮ ಕಥೆಗಳನ್ನು ರಚಿಸಿದ್ದಾರೆ.ಕನ್ನಡ ಮಹಿಳಾ ಸಣ್ಣಕತೆಗಳ ಬೆಳವಣಿಗೆಯ ಚರಿತ್ರೆಯನ್ನು ಆನುಷಂಗಿಕವಾಗಿ ಗಮನಿಸುತ್ತಲೇ ಸಾಮಾಜಿಕ ಪರಿವರ್ತನೆಯ ಸೂಕ್ಷ್ಮ ಪ್ರಕ್ರಿಯೆ ಸಂಭವಿಸುತ್ತ ಸಾಗಿದುದ್ದನ್ನು ಗುರುತಿಸಿಕೊಳ್ಳುತ್ತ ಮಹಿಳೆಯರ ಬದುಕಿನಲ್ಲಿ ಈ ಬದಲಾವಣೆಗಳು ಹೇಗೆ ಪ್ರತಿಫಲನಗೊಂಡಿವೆ, ಎಂಬುದನ್ನು ಆಯಾ ಕಾಲಘಟ್ಟದ ಸಣ್ಣಕಥೆಗಳ ನಿದರ್ಶನದೊಂದಿಗೆ ನಮ್ಮ ಅಧ್ಯಯನ ವಿಶ್ಲೇಷಿಸುತ್ತದೆ. ಮುಖ್ಯವಾಗಿ ಕೌಟುಂಬಿಕ ಸಮಸ್ಯೆಗಳಿಗೆ ಇಲ್ಲಿ ಒತ್ತು ನೀಡಲಾಗುವುದಾದರೂ, ಕುಟುಂಬವು ಸಮಾಜದ ಘಟಕವೇ ಆಗಿರುವುದರಿಂದ ಪರಸ್ಪರ ಒಂದರೊಳಗೊಂದು ಸಮಾವೇಶಗೊಂಡು ಮಹಿಳೆಯರ ಕುರಿತಾದ ಹೊಸ ನೆಲೆಗಳು, ಆಯಾಮಗಳು ಹಂತ ಹಂತದ ಜೀವನ ಕ್ರಮಗಳಲ್ಲಿ ಅಳವಡುತ್ತಾ ಸಾಗಿರುವುದನ್ನು ವಸ್ತುನಿಷ್ಠವಾಗಿ ಪರಿಭಾವಿಸಲಾಗುತ್ತದೆ. ಕುಟುಂಬದ ಚೌಕಟ್ಟಿನಲ್ಲಿಯೇ ಸೆತರ◌ೀ–ಪುರುಷರಿಬ್ಬರೂ ತಮ್ಮ ಬದುಕಿನ ಸಾಥ–ರ್ಕತೆಯನ್ನು ಕಂಡುಕೊಳ್ಳುವ ಅಗತ್ಯವಿದ್ದು, ಪರಸ್ಪರರಲ್ಲಿ ಭಿನ್ನತೆ, ಅಪಸ್ವರ, ಅನುಮಾನಗಳು ಕಾಣಿಸಿಕೊಳ್ಳಲು ಕಾರಣಗಳೇನು ಎಂಬುದನ್ನು ಸಹಾನುಭೂತಿಯಿಂದ ನಿಷ್ಪಕ್ಷಪಾತವಾಗಿ ಬಿಡಿಸಿನೋಡುವ ಹಾಗೂ ಅವರಲ್ಲಿ ಅಪಾರ್ಥಗಳಿಗೆ ಕಾರಣವಾದ ಸಂಗತಿಗಳನ್ನು ಹೋಗಲಾಡಿಸಿ ಸಾಮರಸ್ಯವನ್ನು ಕಂಡುಕೊಳ್ಳುವ ಸಾಧ್ಯತೆಗಳನ್ನು ಅಂತಿಮವಾಗಿ ನಮ್ಮ ಸೃಜನಶೀಲ ಮನಸ್ಸುಗಳು ಹೇಗೆ ನಿರ್ವಹಿಸಿವೆ ಎಂಬುದನ್ನು ನಮ್ಮ ಅಧ್ಯಯನ ಪರಿಶೀಲಿಸುತ್ತದೆ. ಕುಟುಂಬವೇ ಎಲ್ಲ ಆಶೋತ್ತರಗಳನ್ನು ಈಡೇರಿಸುವ ಪ್ರಾಥಮಿಕ ಸಂಸ್ಥೆಯಾಗಿದ್ದ ಕಾಲದಿಂದ ಇಂದು ಮನುಷ್ಯನ ಎಲ್ಲ ವ್ಯವಹಾರಗಳನ್ನು ನಿರ್ವಹಿಸಿಕೊಳ್ಳಲು ಅಸಂಖ್ಯಾತ ಸಂಸ್ಥೆಗಳನ್ನು ಅವಲಂಬಿಸಿರುವ ಸಂಕೀರ್ಣ ವ್ಯವಸ್ಥೆಯವರೆಗೆ ನಡೆದಿರುವ ಸಾಮಾಜಿಕ ವಿಕಾಸ ಚರಿತ್ರೆಯು ಮಹತ್ವದ ಅನೇಕ ತಿರುವುಗಳಿಗೆ ಸಾಕ್ಷಿಯಾಗಿದೆ.

ಮಹಿಳೆಯರ ಬದುಕಿನ ಸಮಸ್ಯೆಗಳಾದ ವಿವಾಹ ವಿಚ್ಛೇದನ, ಬಾಲ್ಯವಿವಾಹ, ಪುನರ್ ವಿವಾಹ, ವಿಧವಾವಿವಾಹ, ಅಂತರ್ ಜಾತೀಯ ವಿವಾಹ, ಪ್ರೀತಿ, ಪ್ರೇಮ, ದಾಂಪತ್ಯ ಸಮಸ್ಯೆ ಅಂಗವಿಕಲ ಸಮಸ್ಯೆ, ಶಿಕ್ಷಣ ಮುಂತಾದವುಗಳನ್ನು ಮೆಟ್ಟಿ ನಿಲ್ಲುವಂತ ಛಲ, ಮಹಿಳೆಯರಲ್ಲಿ ಮೂಡಿತು. ಇಂತಹ ಬದಲಾದ ಮಹಿಳೆಯರ ಬದುಕನ್ನು ಜೀವನವನ್ನು ಅವರ ಸಮಸ್ಯೆಗಳನ್ನು ಕುರಿತು ಎಂ.ಕೆ. ಇಂದಿರಾ, ತ್ರಿವೇಣಿ, ತ.ರಾ.ಸು. ಅನಕೃ, ಮುಂತಾದ ಲೇಖಕರು ಕಥೆಗಳನ್ನು ರಚಿಸಿದ್ದಾರೆ. ಹಾಗೆ ಮಹಿಳೆಯರ ಮೇಲಿನ ಅನುಕಂಪದಿಂದ ಮಹಿಳಾ ಸಮಸ್ಯೆಗಳನ್ನು ಭಿನ್ನ ಆಯಾಮದಿಂದ ನೋಡಬಹುದು.

ಶತಮಾನಗಳಿಂದ ವಂಚನೆ , ದಬ್ಬಾಳಿಕೆಗೆ ಗುರಿಯಾಗುತ್ತ ಬಂದಿರುವ ಮಹಿಳೆಯರ ಸಮಸ್ಯೆಗಳು ಇದೀಗ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ಮತ್ತಷ್ಟು ಸೂಕ್ಷ್ಮ ತೊಡಕುಗಳಿಗೆ ಒಳಪಡುತ್ತಿವೆ . ಸಾಂಪ್ರದಾಯಕ ಸಾಮಾಜಿಕ ವ್ಯವಸ್ಥೆ ಹಾಗೂ ಪುರುಷ ಪ್ರಾಧಾನ್ಯತೆಯ ದಬ್ಬಾಳಿಕೆಗಳೊಂದಿಗೆ ಇಂದು ತೋರುತ್ತಿರುವ ಸಾಮಾಜಿಕ – ರಾಜಕೀಯಬಿಕ್ಕಟ್ಟುಗಳಹಿನ್ನೆಲೆಯಲ್ಲಿಹೊಸಸಮಸ್ಯೆಗಳು ಕಂಡುಬರುತ್ತಿವೆ . ಶೈಕ್ಷಣಿಕ ಹಾಗೂ ವೃತ್ತಿ ವಿಷಯಗಳಲ್ಲಿ

ಮಹಿಳೆಯರು ಸ್ವಂತ ಸಾಧನೆಗಳನ್ನು ಮಾಡುತ್ತ ಪುರುಷರಿಗೆ ಸಮಾನವಾದ ಪೈಪೋಟಿ ನೀಡುತ್ತಿದ್ದರೂ ಅವರ ಸಾಮಾಜಿಕ, ಕೌಟುಂಬಿಕ ಸ್ಥಾನಮಾನಗಳಲ್ಲಿ ಸಂಭವಿಸುತ್ತಿರುವ ಪರಿವರ್ತನೆಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗುತ್ತಿಲ್ಲ. ಮಹಿಳಾ ಸಮಸ್ಯೆಗಳು ಅದರಲ್ಲೂ ವಿಶೇಷವಾಗಿ ಕೌಟುಂಬಿಕ ಸಮಸ್ಯೆಗಳ ಆಂತರಿಕ ನೆಲೆಗಳನ್ನು ಶೋಧಿಸಲು ಸಾಧ್ಯವಾಗುವುದಿಲ್ಲ.

ರಸವೆ ಜನನ ,ವಿರಸ ಮರಣ,ಸಮರಸವೇ ಜೀವನಎಂಬ ವರಕವಿಬೇಂದ್ರೆಯವರ ವಾಣಿಯನ್ನು ಸಾಕ್ಷಾತ್ಕರಿಸಿಕೊಳ್ಳುವ ನಿಟ್ಟಿನಲ್ಲಿ ಹೆಣ್ಣಿನ ಹೃದಯಸ್ಥ ಭಾವಗಳನ್ನು ಮಾನವೀಯ ಹಾಗೂ ನೈತಿಕ ಆಕಾಂಕ್ಷೆಗಳನ್ನು ಹುಡುಕುತ್ತ, ಗಂಡನು ಅದನ್ನು ಗೌರವಿಸಬೇಕು,ಹಾಗೂ ಪುರುಷ ಪ್ರಾಧಾನ್ಯತೆಯ ದೌರ್ಜನ್ಯ ಕುಂಠಿತಗೊಂಡು, ಇಬ್ಬರಲ್ಲಿ ಸಖ –ಸಖಿ ಭಾವ ಅಂತಿಮವಾಗಿ ನೆಲೆಗೊಂಡು ,ಸುಖಿ ಕುಟುಂಬ,ಸುಖಿ ಸಮಾಜ  ನಿರ್ಮಾಣವಾಗಲಿ ಎಂಬ ಉದಾತ್ತತೆಯನ್ನು ಪ್ರತಿಪಾದಿಸುವ, ಪ್ರಸಾರಗೊಳಿಸುವ ಮಾನವೀಯ ನೆಲೆಯು ಮುಖ್ಯವಾದುದಾಗಿದೆ.

**ಮುಖ್ಯಾಂಶಗಳು**

- ಪುರುಷ ಪ್ರಧಾನ ವ್ಯವಸ್ಥೆಯ ಕುಟುಂಬ ಜೀವನದಲ್ಲಿ ಹೆಣ್ಣು ಶೋಷಣೆಯ ಕೇಂದ್ರಬಿಂದುವಾಗಿದ್ದಾಳೆ.
- ಪರಿಸ್ಥಿಯ ಒತ್ತಡಕ್ಕೆ ಒಳಗಾದ ಹೆಣ್ಣು, ಹಲವಾರು ಅಮಾನವೀಯ , ದಾರುಣ ದುರಂತಗಳಿಗೆ ಹೆಣ್ಣು ಒಳಗಾಗುತ್ತಾಳೆ.
- ಕೃತಕವಾದ ಮತೀಯ ನಿಯಮಗಳನ್ನು ಪಾಲಿಸುವುದಕ್ಕಾಗಿ, ಪ್ರಕೃತಿ ಸಹಜವಾದ ನಿಯಮಗಳನ್ನು ಗಾಳಿಗೆ ತೂರಿ ಪುರುಷ ದಬ್ಬಾಳಿಕೆ ಶೋಷಣೆಯ ದಾರಿಯನ್ನು  ಸಾಂಕೇತಿಸುತ್ತದೆ.
- *ಹೆಣ್ಣಿನ ಅಸಹಾಯಕ ಸ್ಥಿತಿ.

**ವಿಶ್ಲೇಷಣೆ**

ಕುಟುಂಬವು ಮಾನವನ ಸಮೂಹ ಜೀವನದ ಆರಂಭಿಕ ನೆಲೆಯಾದರೆ, ವಿವಾಹವು ಕುಟುಂಬದ ಉಗಮ ಹಾಗೂ ಅಸ್ತಿತ್ವದ ಮೂಲ ಧಾತು ಹಾಗೂ ಕೌಟುಂಬಿಕ ಜೀವನದ ಮಹಾದ್ವಾರ. ಸಮಾಜದ ಐಕ್ಯತೆ ಹಾಗೂ ನಿರಂತರತೆಗೆ ಇವುಗಳ ಕೊಡುಗೆ ಅಪಾರ . ಸಾಮಾಜಿಕ ವ್ಯವಸ್ಥೆಯ ಕೇಂದ್ರ ಸ್ಥಾನದಲ್ಲಿರುವ ಈ ಸಂಸ್ಥೆಗಳು, ಇಡೀ ವ್ಯವಸ್ಥೆಗೆ ಸ್ಥಿರತೆ , ಭದ್ರತೆಯನ್ನು ನೀಡುವುದರ ಜೊತೆಗೆ ಮಾನವನ ವ್ಯಕ್ತಿಗತ ಜೀವನದ ಕೇಂದ್ರಗಳಾಗಿ ಸಾಮಾಜಿಕ ವ್ಯವಸ್ಥೆಯನ್ನು ಮುನ್ನಡೆಸಿ ಅದರ ನಿರಂತರತೆಯನ್ನು ಕಾಪಾಡುತ್ತವೆ.

ಇಲಿಯಟ್ ಮತ್ತು ಮೆರಿಲ್ ರವರು ಗಂಡ ಹೆಂಡತಿ ಮತ್ತು ಮಕ್ಕಳನ್ನೊಳಗೊಂಡಿರುವ ಜೈವಿಕ 'ಸಾಮಾಜಿಕ ಘಟಕವೇ" ಕುಟುಂಬವೆನ್ನುತ್ತಾರೆ.

ಎಂ. ಎಫ್ . ನಿಮ್ ಕಾಫ್ ರವರ ಪ್ರಕಾರ: " ಸಂತತಿ ಸಹಿತವಾಗಿ ಇಲ್ಲವೆ ಸಂತತಿರಹಿತವಾಗಿ ಗಂಡ ಹೆಂಡಿರು ಕೂಡಿ ಅಗಿರುವ ಅಥವಾ ಸ್ತ್ರೀ ಅಥವಾ ಪುರುಷನೋರ್ವನೇ ಮಕ್ಕಳಿಂದೊಡಗೂಡಿ ಆಗಿರುವ, ಮತ್ತು ಹೆಚ್ಚು – ಕಡಿಮೆಬಹುಕಾಲಬಾಳುವಸಂಘವೇ ಕುಟುಂಬ, "

ಕನ್ನಡ ಕಥಾ  ಸಾಹಿತ್ಯದಲ್ಲಿ  ಕಥೆಗಾರ್ತಿಯರು ತಮ್ಮದೇ ಆದ ನಿಲುವು, ದೃಷ್ಟಿಕೋನಗಳಿಂದ ಸಮಾಜವನ್ನು ನೋಡುವ ರೀತಿಯಿಂದ ಭಿನ್ನವಾಗಿಸಿಕೊಂಡು ವಿಶಿಷ್ಟವಾಗಿ ನಿಲ್ಲುತ್ತಾರೆ. ವೈದೇಹಿ, ಕೊಡಗಿನ ಗೌರಮ್ಮ ,ಸಾರಾ ಅಬೂಬಕ್ಕರ್ ,ವಸುಮತಿ ಉಡುಪ ಸುನಂದಾ ಪ್ರಕಾಶ್ ಕಡಮೆ ಇವರು ಅಂದಂದಿನ ಪರಿಸ್ಥಿತಿ ,ಸನ್ನಿವೇಶಗಳಿಗೆ ತಕ್ಕಂತೆ ತಮ್ಮ ಕಥೆಗಳಲ್ಲಿ ಮಹಿಳೆ ಎದು–ರಿಸುವ ಕೌಟುಂಬಿಕ ಸಮಸ್ಯೆಗಳನ್ನು ಯಾವ ರೀತಿ ಚಿತ್ರಿಸಿದ್ದಾರೆ ಎಂಬುದನ್ನು ನೋಡಬಹುದಾಗಿದೆ.

ವೈದೇಹಿಯವರು ಕಥೆಗಳಲ್ಲಿ ಘಟನಾ ಪ್ರಧಾನವಾದ ನಿರೂಪಣೆಗಳಿಗಿಂತ ಘಟನೆಗಳ ಹಿಂದಿನ ರೂಪಿಸುವ ಮಾನವೀಯ ಭಾವನಾತ್ಮಕ ಎಳೆಗಳು ಕಂಪನಗಳು ಮಹತ್ವ ಪಡೆಯುತ್ತವೆ. ಇದಕ್ಕೆ ನಿದರ್ಶನವಾಗಿ ಅವರ 'ಅಮ್ಮಚ್ಚಿಯೆಂಬ ನೆನಪು' ಎಂಬ ಕಥ–'ಯಲ್ಲಿ ಚರ್ಚಿಸಬಹುದು. ಈ ಕಥೆಯ ನಿರೂಪಕಿ ಒಬ್ಬ ಪುಟ್ಟಹುಡುಗಿ ಅವಳ ಮುಗ್ಧ ಗ್ರಹಿಕೆಗಳ ಮೂಲಕ ಅಮ್ಮಚ್ಚಿಯ ವ್ಯಕ್ತಿತ್ವದ ಅನಾವರಣಗೊಳಿಸುತ್ತದೆ

ಅಮ್ಮಚ್ಚಿಯ ಸೌಂದಯ್ಯಪ್ರಜ್ಞೆ, ಜೀವನೋತ್ಸಾಹ ಅವಳನ್ನು ಮದುವೆಯಾಗಲು ಇಚ್ಚಿಸುವ ವೆಂಕಪ್ಪಯ್ಯನಿಗೆ ಹಿಡಿಸದೆ ಅವಳನ್ನು ಹೇಗಾದರು ಮಾಡಿ ನಿಯಂತ್ರಿಸಬೇಕೆಂಬ ಪ್ರಯತ್ನ ಹಾಸ್ಯಾಸ್ಪದವಾಗಿ ತೋರುತ್ತದೆ. ಅಮ್ಮಚ್ಚಿಗೆ ಅವನ ಬಗೆಗೆ ಅಂಥ ಭಾವನೆಗಳೇ ಇರುವುದಿಲ್ಲ. ಹೇಗಾದರು ಅವನಿಂದ ತಪ್ಪಿಸಿಕೊಂಡರಾಯಿತೆಂಬ ಬಯಕೆ ಅವಳದು. ಆದರೆ ಪರಸ್ಪರರಲ್ಲಿ ಮೇಲುನೋಟಕ್ಕೆ ಹಾಸ್ಯಕ್ಕಾಗಿ ಎಂಬಂತೆ ನಡೆದ ರವಿಕೆ ಹೊಲಿಸುವ ಪ್ರಸಂಗ ಹಾಗೂ ಅದಕ್ಕೆ ಪ್ರತಿಯಾಗಿ ಅವನ ಶರ್ಟನ್ನು ವಿರೂಪಗೊಳಿಸುವ ಪ್ರಸಂಗಗಳು ಅಮ್ಮಚ್ಚಿಯ ಮೇಲೆ ವೆಂಕಪ್ಪಯ್ಯನ ಆಕ್ರಮಣಕ್ಕೆ ಕಾರಣವಾಗಿ ಅವಳು ಅವನನ್ನು ಮದುವೆಯಾಗಲೇ ಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ. ಆದರೆ ಮದುವೆಯಾಗಿ ಅವಳನ್ನು ಕರೆದುಕೊಂಡು ತಿರುಪತಿಗೆ ಹೋಗಿ ಅಲ್ಲಿ ವ್ಯಾಪಾರ ಆರಂಭಿಸುವ ಅವನು ಬಹುಬೇಗನೆ ನೇಣಿಗೆ ಶರಣಾಗುವದು, ಅಮ್ಮಚ್ಚಿ ತಿರುಗಿ ತವರು ಮನೆಗೆ ಬರುವುದು ಕಥೆಗೆ ನಿಗೂಢತೆ ಸ್ಪರ್ಶನೀಡಿವೆ. ಕೌಟುಂಬಿಕ  ಸಮಸ್ಯೆಗಳು ಎಂದ ಕ್ಷಣ ಮಹಿಳೆಗೆ ಬಂದಿರುವ ಸಮಸ್ಯೆಗಳನ್ನು ಓಗೊಡುವ ಮನಸುಗಳು ತುಂಬಾ ವಿರಳ. ಇಲ್ಲಿ ಸ್ತ್ರೀ–ಪುರುಷಸಂಬಂಧದಸೂಕ್ಷ್ಮ ತಾಕಲಾಟಗಳನ್ನುಮುಗ್ಧಜೀವವೊಂದರಸಾಕ್ಷಿಪ್ರಜ್ಞೆಯೊಂದಿಗೆ ಕಂಡು ಒಬ್ಬೊಬ್ಬರೂ ತಮ್ಮ ನಿರೀಕ್ಷೆಯ ಕ್ರಮಗಳಲ್ಲಿ ಹೇಗೆ ಸ್ವತಂತ್ರರು ಹಾಗೂ ಭಿನ್ನರು ಎಂದು ಮತ್ತು ಒಬ್ಬೊಬ್ಬರಿಗೂ ತಮ್ಮ ನಡತೆಗಳೇ ಹೇಗೆ ಸರಿ ಎಂದು ನಂಬಿಕೊಂಡಿರುತ್ತಾರೆ ಎಂಬುದನ್ನು ಲೇಖಕಿ ಕಲಾತ್ಮಕವಾಗಿ ಚಿತ್ರಿಸಲು ಯತ್ನಿಸಿದ್ದಾರೆ.

ಕೊಡಗಿನ ಗೌರಮ್ಮ ಅವರ' ವಾಣಿಯ ಸಮಸ್ಯೆ' ಗೌರಮ್ಮನವರ ಶ್ರೇಷ್ಠ ಕಥೆಗಳಲ್ಲೊಂದು ಎಂದು ಗುರುತಿಸಲಾಗಿದೆ. ಇಂದಿರಾ ಗಂಡನನ್ನು ಕಳೆದುಕೊಂಡು ವಿಧವಾ ಬದುಕನ್ನು ತನ್ನ ಪಾಲಿಗೆ ಸಹನೆಯಿಂದ ಬದುಕುತ್ತಿದ್ದಳು. ಆದರೆ ಅವರ ಪಕ್ಕದ

ಮನೆಗೆ ರತ್ನವಾಣಿ ಎಂಬ ದಂಪತಿಗಳು ಬಾಡಿಗೆಗೆ ಬರುತ್ತಾರೆ. ಕ್ರಮೇಣ ಎಷ್ಟೇ ಸಂಯಮ ಪ್ರಕಟಿಸಿದರು. ಇಂದುವಿಗೆ ರತ್ನನಲ್ಲಿ, ರತ್ನನಿಗೆ ಇಂದುವಿನಲ್ಲಿ ಪ್ರೀತಿಯ ಭಾವನೆಗಳು ಅಂಕುರಿಸಲಾರಂಭಿಸುತ್ತವೆ. ಅತ್ಯಂತ ಸೂಕ್ಷ್ಮ ಮನಸ್ಸಿನ ಇಂದು ಇದಕ್ಕೆ ಅವಕಾಶ ಕೊಡದೆ ತಾನೇ ಮನೆ ಖಾಲಿ ಮಾಡಿ ಬೇರೆಡೆಗೆ ಹೋಗುತ್ತಾಳೆ. ರತ್ನನ ಹೆಂಡತಿ ವಾಣಿಗೆ ಅವಳೇಕೆ ಮನೆಬಿಟ್ಟು ಹೋದಳೆಂಬ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯುತ್ತದೆ. ಅತ್ಯಂತ ಸಹಜವಾಗಿ ಹಂತಹಂತವಾಗಿ ಹೇಗೆ ಮಾನವ ಸಂಬಂಧಗಳು ಹೊಸ ಹೊಸ ತಿರುವುಗಳನ್ನು ಪಡೆಯುತ್ತ ಸಾಗುತ್ತವೆ ಎಂಬುದನ್ನು ಕಲಾತ್ಮಕವಾಗಿ ಇಲ್ಲಿ ಗೌರಮ್ಮ ನಿರೂಪಿಸಿದ್ದಾರೆ. ಇದು ಮನೋವೈಜ್ಞಾನಿಕ ಭೂಮಿಕೆಯಲ್ಲಿ ನಡೆಯುವ ವಾಸ್ತವ ಹಾಗೂ ಸಾಮಾಜಿಕ ನೈತಿಕತೆಗಳ ನಡುವಿನ ಸಂಘರ್ಷವನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಗೌರಮ್ಮನವರ ಕಥೆಗಳು ಖಾಸಗಿ ಬದುಕಿನ ಸೀಮಿತ ಕೌಟುಂಬಿಕ ವೈಯಕ್ತಿಕ ನೆಲೆಗಳನ್ನು ನಡೆಯುವಂತೆ ತೋರಿದರೂ ಅವು ಹೇಗೆ ಒಟ್ಟು ಸಮಾಜದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಾಂಸ್ಕೃತಿಕ ನೆಲೆಗಳನ್ನು ಸೂಕ್ಷ್ಮವಾಗಿ ಒಳಗೊಳ್ಳುತ್ತವೆ ಎಂಬುದನ್ನು ತಿಳಿಯಬಹುದು.

ಸಾರಾ ಅಬೂಬಕ್ಕರ್  ಅವರ' ನಿಯಮ ನಿಯಮಗಳ ನಡುವೆ' ಕಥೆಯಲ್ಲಿ. ಪುರುಷಪ್ರಧಾನ ವ್ಯವಸ್ಥೆ ಸ್ತ್ರೀಯರನ್ನು ಶೋಷಿಸುವ ವಿಷಯದಲ್ಲಿ ಯಾವುದೇ ಜಾತಿ, ಧರ್ಮಗಳಲ್ಲಿ ವ್ಯತ್ಯಾಸವಿಲ್ಲ ಎಂಬ ಸಂಗತಿಯನ್ನು ಈ ಕಥೆ ಒತ್ತಿ ಹೇಳುತ್ತದೆ. ಜತೆಗೆ ಮುಸ್ಲಿಂ ಸಮಾಜದಲ್ಲಿ ಕಂಡುಬರುವ ಶೋಷಣೆಯ ವಿಶಿಷ್ಟ ಮಾದರಿಗಳ ಚಿತ್ರಣ ಇಲ್ಲಿ ಎದ್ದು ಕಾಣುವ ಸಂಗತಿ, ಜೊಹರಾ ಎಂಬ ಅಸಹಾಯಕ ಹೆಣ್ಣು ಮಗಳ ದುರಂತ ಕಥೆ ಇಲ್ಲಿ ಕರಳು ಮಿಡಿಯುವಂತೆ ಚಿತ್ರಿತವಾಗಿದೆ. ಅಮಿನ ಎಂಬ ಹೆಣ್ಣು ಮಗಳು ಗಂಡನನ್ನು ಕಳೆದುಕೊಂಡು ತನ್ನ ಇಬ್ಬರು ಮಕ್ಕಳಾದ ಜೊಹರಾ ಹಾಗೂ ಶಾಫಿಯನ್ನು ಸಾಕುತ್ತಾಳೆ. ಈ ಇಬ್ಬರು ಮಕ್ಕಳು ಶಾಲೆಗೆ ಹೋಗದೆ ಹೊಟ್ಟೆಪಾಡಿಗಾಗಿ ಬಾಲ್ಯದಲ್ಲಿಯೇ ದುಡಿಯಲು ಹೋಗಬೇಕಾಗುತ್ತದೆ. ಆ ದುಡಿಮೆಯ ಗುರಿ ಜೊಹರಾಳ ಮದುವೆಯೇ ಆಗಿರುವುದು ಮುಸ್ಲಿಂ ಸಮುದಾಯದಲ್ಲಿಯೂ ಹೆಣ್ಣುಮಕ್ಕಳ ಮದುವೆ ಹೇಗೆ ಸವಾಲಿನದು ಎಂಬುದನ್ನು ಧ್ವನಿಸುವಂತಿದೆ.

ವಸುಮತಿ ಉಡುಪ ಅವರ 'ಅರ್ಧ ಬರೆದ ಕಾಗದ'ಕಥೆಯಲ್ಲಿ ದಾಂಪತ್ಯ ಜೀವನದ ಎಳೆಗಳೊಂದಿಗೆ ಮಧ್ಯಮ ವರ್ಗದ ಜನರ ಮನಸ್ಥಿತಿ ನಾಯಕಿಯ ಮೇಲೆ ತಂದೆ, ತಾಯಿ, ಗಂಡನ ಕಾಳಜಿ ಗಂಡನ ಪ್ರೇಮ ಪಂಜರದಲ್ಲಿ ಬಂಧಿಯಾಗಿ ಸುಖವನ್ನು ಅನುಭವಿಸುತ್ತಿರುವ ಸಂದರ್ಭದಲ್ಲಿಯೇ ಅವನ ಬಗ್ಗೆ ಮೆಚ್ಚುಗೆಯ ಪ್ರಶಂಸನೀಯ ಮಾತುಗಳನ್ನು ತಾಯಿಗೆ ತಿಳಿಸಲು ಬರೆಯುತ್ತಿದ್ದ ಕಾಗದ ಅರ್ಧಬರೆದು ಅದು ಗಂಡನ ಕೈಗೆ ಸಿಕ್ಕು ಮೆಚ್ಚುಗೆಯ ಮಾತುಗಳು ಹೋಗಿ ಮನಸ್ಸನ್ನು ಗಾಸಿಗೊಳಿಸುವ ಮೂಲಕ ಆ ಪತ್ರ ಪೂರ್ಣವಾಗದೆ ಅರ್ಧ ಪತ್ರವಾಗಿಯೇ ಉಳಿಯುತ್ತದೆ. ಶಿವಮೊಗ್ಗ ಪೇಟೆಯಲ್ಲಿ ದಿನಸಿ ಅಂಗಡಿ ಇಟ್ಟುಕೊಂಡು ಹೊಟ್ಟೆ ಬಟ್ಟೆಗೆ ಕೊರತೆ ಇಲ್ಲದೆ ಬದುಕುತ್ತಿದ್ದಂತಹ ಅನಂತನನ್ನು ಜೀವನ ಸಂಗಾತಿಯಾಗಿ ಪಡೆದು ಪಾಲಿಗೆ ಬಂದದ್ದು ಪಂಚಾಮೃತ ಎಂಬಂತೆ ಮನಃ ಪೂರ್ವಕ ಒಪ್ಪಿಕೊಂಡು ದೊಡ್ಡ ಮನೆಯ ಹಿಂಬದಿಯಲ್ಲಿದ್ದ ಔಟ್ ಹೌಸ್ ನಲ್ಲಿ ಬಾಡಿಗೆಗಿದ್ದರು. ಔಟ್ ಹೌಸಿನ ಮಾಲೀಕರ ಮಗ ಬಟ್ಟೆ ಒಗೆಯುವಾಗ ಕದ್ದು ನೋಡುವ ಸ್ಥಿತಿಯಿಂದ ಬಹಳ ಬೇಸರಗೊಂಡು, ಭಯಗೊಂಡು ಅನಂತನ ಬಳಿ ಹೇಳಿದರೂ ಅವನು, ನೀನು ತಪ್ಪು ತಿಳ್ಕೊಂಡಿದ್ದಿಯಾ ಅನ್ನುವ ನಿರ್ಲಕ್ಷದ ಮಾತು ಸ್ತ್ರೀ ಸಂವೇದನೆಯನ್ನು ಅರ್ಥ ಮಾಡಿಕೊಳ್ಳದಿರುವ ಸ್ಥಿತಿಯನ್ನು ತಿಳಿಸುತ್ತದೆ. ಮಾನಸಿಕ ಸ್ಥೈರ್ಯ ತುಂಬುವ ಸ್ಥಾನದಲ್ಲಿ ನಿಲ್ಲಬೇಕಾದ ಅನಂತ ಅಧೈರ್ಯದಿಂದ "ಸಾಯಲಿ ಬಿಡೇ" ಎನ್ನುವ ನಿರ್ಲಕ್ಷದ ಧೋರಣೆ ಜೊತೆಗೆ ಬೇರೆ ಮನೆ ಹುಡುಕೋಣ ಎಂಬಂತಹ ಮಾತುಗಳು, ಸ್ತ್ರೀಗೆ ಕೌಟುಂಬಿಕ ನೆಲೆಗಳಲ್ಲಿ ಶೋಷಣೆ ಆಗುತ್ತಿರುವುದನ್ನು ಕಾಣಬಹುದು. ಇದನ್ನು ವಿರೋಧಿಸಿ ಮುಂದೆ ಹೋಗಲು ಸಾಧ್ಯವಿಲ್ಲದ ಎಷ್ಟೋ ಕುಟುಂಬಗಳಲ್ಲಿ ಸ್ತ್ರೀಯರು ಇದನ್ನು ಎಂದಿಗೂ ಅನುಭವಿಸುತ್ತಿರುವುದನ್ನು ವರ್ತಮಾನದಲ್ಲಿ ನಿಂತು ನೋಡಿದಾಗ ಆಗಿನ ಕಥೆಗಳು ಇಂದಿಗೆ ಮುಖ ಮಾಡಿ ನಿಲ್ಲುತ್ತದೆ. ಆ ಮೂಲಕ ತಾಯಿಗೆ ತನ್ನ ಪತಿಯನ್ನು ಹೊಗಳಿ ಬರೆದಿದ್ದ ಕಾಗದ ಅವರಿಗೆ ಯೋಗ ಕೈಗೂಡದೆ ಅವ–ರಿಗೆ ಅರ್ಧ ಬರೆದ ಕಾಗದವಾಗಿ ಉಳಿದು ಬಿಡುತ್ತದೆ. ಸ್ತ್ರೀ ಶಿಕ್ಷಣ ಪಡೆಯಬೇಕು, ಆ ಮೂಲಕ ತನ್ನ ಅಂತರಂಗದ ತೊಳಲಾಟ, ದ್ವಂದ್ವಗಳನ್ನು ಪರಿಸ್ಥಿತಿಗಳಿಗೆ ಪ್ರತಿರೋಧ ಒಡ್ಡುವ ಮೂಲಕ ಜಾಗೃತಳಾಗಬಹುದು ಎಂಬ ತುಡಿತವನ್ನು ಕಾಣಬಹುದು.

ಸುನಂದಾ ಪ್ರಕಾಶ್ ಕಡಮೆ ಅವರ 'ಮಳೆ ಹೊಯ್ದು ನಿಂತ ಕ್ಷಣ'ದಲ್ಲಿ ಕುಟುಂಬದಲ್ಲಿ ಗಂಡು ಹೆಣ್ಣಿನ ಪರಸ್ಪರ ಪಾತ್ರ ಜವಾಬ್ದಾರಿ ಹಾಗೂ ಅಗತ್ಯವನ್ನು ತೋರಿಸಿಕೊಡುವ ಕಥೆ ಇದಾಗಿದೆ ಬಳ್ಳಾರಿಯ ಕಾರ್ಖಾನೆಯೊಂದರಲ್ಲಿ ಕೆಲಸಕ್ಕೆ ಹೋಗಿರುವ ಗಂಡ, ಹಳ್ಳಿಯಲ್ಲಿ ಮಗಳು ಹಾಗೂ ಮಗನೊಂದಿಗೆ ಜೀವನ ಸಾಗಿಸುತ್ತಿರುವ ಹೆಂಡತಿ ತನ್ನ ಅಸಾಹಾಯಕತೆಯಿಂದ ಗಂಡನಿಗೆ ಬೈಯುತ್ತಾ  "ನಿಮ್ಮ ದೊಡ್ಡಪ್ಪ ಚಿಕ್ಕಪ್ಪಂದಿರ ಪಾಲಿನದೆಲ್ಲ ನಾನು ಸರಿ ಮಾಡಿರಬೇಕು ಇಲ್ಲಿ, ಅವರವರ ಹೆಂಡತಿ ಅಲ್ಲಿ" ಎಂಬಲ್ಲಿ ಜೀವನದ ದಿನನಿತ್ಯದ ಜಂಜಡವನ್ನು ಗಂಡನ ಒತ್ತಾಸೆ ಇಲ್ಲದೆ ಏಗಬೇಕಾದ ಅನಿವಾರ್ಯತೆಯು ಕಾಣಸಿಗುತ್ತದೆ. ತನ್ನ ಇಬ್ಬರೂ ಮಕ್ಕಳನ್ನು ಬೆಳೆಸುವ ಜವಾಬ್ದಾರಿ ಕೇವಲ ಹೆಂಗಸೀನದಷ್ಟೇ ಇರುವುದಿಲ್ಲ ಗಂಡನಿಗೂ ಇರುತ್ತದೆ ಎಂಬುದನ್ನು ಮರೆತಿರುವ ಹಾಗಿದೆ. ಜೊತೆಗೆ ಅವರ ದೊಡ್ಡಪ್ಪ, ಚಿಕ್ಕಪ್ಪಂದಿರ ಪಾಲನ್ನು ಸಹಿತ, ಒಂದು ಕಂಚಿಕಾಯಿಯನ್ನು ಹರಿಯಲು ಹೋದರೆ ಅವರ ಪಾಲೆಂದು ಬೈದು ಕಳಿಸುವ ತಾಯಿಯ ಮನಸ್ಥಿತಿ ಗಂಡನಿಲ್ಲದ ಸಂಸಾರದ ಚಿತ್ರವನ್ನು ನೆನಪಿಸುತ್ತದೆ.

'ಸತಿ–ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎನ್ನುತ್ತಾರೆ ದೇವರ ದಾಸಿಮಯ್ಯನವರು. ಸತಿಪತಿಗಳು ಪರಸ್ಪರರ ಇಚ್ಛೆಗಳನ್ನು ಅರಿತು ಬಾಳುವವರಾಗಬೇಕು, ಪ್ರೀತಿ ವಿಶ್ವಾಸಗಳಿಂದ ತುಂಬಿದ ಮನೆ ಆಗಬೇಕು ಎಂಬುದು ಪೂರ್ಣದೃಷ್ಟಿಯ ಪರಿಕಲ್ಪನೆ. ಇದು ಆರೋಗ್ಯಪೂರ್ಣ ದೃಷ್ಟಿ. ಇಂಥ ದೃಷ್ಟಿ ಮೂಡಿದಾಗಲೇ ಸಂಸಾರದಲ್ಲಿ ಸುಖ ಮತ್ತು ನೆಮ್ಮದಿ ನೆಲೆಗೊಳ್ಳಲು ಸಾಧ್ಯ. ಆದರೆ ಕೇವಲ ಹಣವೇ ಬದುಕಿನ ಮೌಲ್ಯಗಳನ್ನು ನಿರ್ಧರಿಸುವ ಸಮಕಾಲೀನ ಸಂದರ್ಭದಲ್ಲಿ ಸಾಂಸಾರಿಕ ಜೀವನ ಏರುಪೇರಾಗಿದೆ. ಹಣ ಮಾತನಾಡುವಾಗ ಪ್ರೀತಿ ಸಾಯುತ್ತದೆ! 'ತಾಮ್ರದ ಕಾಸು ತಾಯಿ ಮಕ್ಕಳನ್ನೇ ಅಗಲಿಸಿತು' ಎಂಬ ಗಾದೆಯ ಮಾತಿನಂತೆ ಇಲ್ಲಿ ಗಂಡ–ಹೆಂಡತಿಯರು ಪರಸ್ಪರ ಅರಿತು ಬದುಕಿದಾಗ ಸಂಸಾರವೆಂಬ ದೋಣಿ ಸುಗಮವಾಗಿ ಸಾಗುತ್ತದೆ.

**ಉಪಸಂಹಾರ**

ಭಾರತದ ಕುಟುಂಬವು ಮಹೋನ್ನತವಾದ ಆದರ್ಶ ಮತ್ತು ಮೌಲ್ಯಗಳ ಆಧಾರದ ಮೇಲೆ ರೂಪಿಸಲ್ಪಟ್ಟ ಭವ್ಯವಾದ ಸಂಸ್ಥೆ ಅನುಭಾವಿ ಕವಿ ಗುಂಡಪ್ಪನವರ "ಮನೆಯೊಳಗೆ ಮಠವಿಹುದು ಮಂಕುತಿಮ್ಮ "ಎಂಬ ನುಡಿಯಂತೆ ಕುಟುಂಬವನ್ನು ಐಹಿಕ ಬಯಕೆಗಳ ಪೂರೈಕೆಗೆ ಮಾತ್ರ ಸೀಮಿತಗೊಳಿಸದೆ ಆಧ್ಯಾತ್ಮಿಕ ಸಾಧನೆಯ ಕ್ಷೇತ್ರ ಹಾಗೂ ಸಾಧನವನ್ನಾಗಿ ರೂಪಿಸಲಾಗಿದೆ. ಸತಿ "ಪತಿಯರಸಂಬಂಧವಾನ್ನುಪಾವಿತ್ರತೆ, ಪರಸ್ಪರ ವಿಶ್ವಾಸ, ತ್ಯಾಗ, ಪ್ರೀತಿ, ಮಾತ್ರವಲ್ಲದೆ, ಪರಸ್ಪರರ ಹಕ್ಕು ಹಾಗೂ ಕರ್ತವ್ಯಗಳಿಗೂ ಮಹತ್ವ ನೀಡಿ ಜನ್ಮಾಂತರಗಳಲ್ಲೂ ಮುರಿಯಲಾಗದ, ಮುರಿಯಬಾರದ ಬೆಸುಗೆಯನ್ನಾಗಿ ರೂಪಿಸಲಾಗಿದೆ. 'ನಮ್ಮ ಆಸೆಗಳೆಲ್ಲಾ ಈಡೇರುವುದಾದರೆ ಸ್ವರ್ಗದ ಹಂಗೇಕೆ' ಎಂದು ಅನುಭಾವಿ ಕವಿ ಸರ್ವಜ್ಞ ಹೇಳುತ್ತಾರೆ. ಅವಶ್ಯಕತೆಯಿಲ್ಲ ಎಂದು ನಿಸ್ಸಂಶಯವಾಗಿ ಹೇಳಬಹುದು. ಏಕೆಂದರೆ, ಹಾಗಾಗುವುದಿಲ್ಲ. ಎಲ್ಲ ಕನಸುಗಳು ನನಸಾಗುವುದಿಲ್ಲ. ಆಗಿದ್ದರೂ ಅದೊಂದು ವಿರಳಾತಿ ವಿರಳ ಘಟನೆಯೇ ಸರಿ. ಅದರಲ್ಲೂ ಚಪಲಚಿತ್ತರಾದ ಮಾನವರು ಕಾಣುವ ನೂರಾರು ಚಿತ್ರ– ವಿಚಿತ್ರ, ಸಾಧ್ಯ" ಅಸಾಧ್ಯವಾದಭ್ರಮಾತ್ಮಕನಿ–ರೀಕ್ಷೆಗಳನ್ನು ಇಟ್ಟುಕೊಂಡು ಆಗುವವಿವಾಹ ಎಲ್ಲರಪಾಲಿಗೂಸ್ವರ್ಗಸುಖವನ್ನು ತಂದುಕೊಟ್ಟಿದೆ ಎಂದುಕನಸುಗಳು, ನೂರಾರು ಹೇಳುವುದು ಬಹುಶಃ ಉತ್ತೇಕ್ಷೆಯ ಮಾತಾದೀತೇನೋ. ಸಮಾಜದಲ್ಲಿ ಮುಖ್ಯ ಸಂಸ್ಥೆಯಾಗಿ ಹೊರಹೊಮ್ಮುತ್ತಿರುವ ಕುಟುಂಬ ವ್ಯವಸ್ಥೆಯು ಸರ್ವರ ಮನೋಭಿಲಾಷೆಗಳನ್ನು, ಅಭಿವೃದ್ಧಿಯನ್ನು ,ಸಮಸ್ಯೆಗಳ ಪರಿಹಾರವನ್ನು ಕಂಡುಕೊಳ್ಳುವುದು ಇದರಡಿಯಲ್ಲಿಯೇ ಎಂದು ಹೇಳಬಹುದು .ಸಮಸ್ಯೆಗಳು ಕೇವಲ ಮಹಿಳೆಯರಿಗೆ ಬರುತ್ತವೆ ಎಂಬುದಲ್ಲ ಆದರೆ ಬಂದಿರುವ ಸಮಸ್ಯೆಗಳನ್ನು ಪುರುಷನು ನಿಭಾಯಿಸುವ ರೀತಿ ಬೇರೆ ಮಹಿಳೆ ನಿಭಾಯಿಸುವ ರೀತಿ ಬೇರೆ .ಕುಟುಂಬದಲ್ಲಿ ಪ್ರತಿಯೊಬ್ಬರ ಆಶೋತ್ತರಗಳನ್ನು ಈಡೇರಿಸುತ್ತಾ ಮಹಿಳೆ ತನ್ನತನವನ್ನು ಬಿಟ್ಟು ತನ್ನ ಅಸ್ಮಿತೆಯನ್ನು ಹುಡುಕುವುದರಲ್ಲಿ ಕಾಲ ಕಳೆಯುತ್ತಾಳೆ. ಹೀಗೆ ಹಲವಾರು ಕಥೆಗಾರ್ತಿಯರು ಕುಟುಂಬದಲ್ಲಿ ಮಹಿಳೆಯ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಅಂದಂದಿನ  ಪರಿಸರದಲ್ಲಿ ತಮ್ಮ ಸುತ್ತಲೂ ನಡೆದಿರುವುದನ್ನು ಕಥಾ ರೂಪದಲ್ಲಿ ನೀಡಿರುವುದನ್ನು ಇಲ್ಲಿ ಗಮನಿಸಬಹುದು.

**ಪರಾಮರ್ಶನ ಗ್ರಂಥಗಳು**


1. ಕರೀಗೌಡ ಬೀಚನಹಳ್ಳಿ (ಸಂ) ಸ್ವಾತಂತ್ರ್ಯೋತ್ತರ ಕನ್ನಡ ಸಣ್ಣ ಕಥೆಗಳು, ಸಾಹಿತ್ಯ ಅಕಾಡೆಮಿ, 2020 (1ನೇ ಆವೃತ್ತಿ).
2. ಜಿ ಎಸ್ ಅಮೂರ, ಕನ್ನಡ ಕಥನ ಸಾಹಿತ್ಯ: ಸಣ್ಣಕಥೆ, ಪ್ರಿಯದರ್ಶಿನಿ ಪ್ರಕಾಶನ, 2012 (ಎರಡನೇ ಆವೃತ್ತಿ).
3. ಟಿ.ಪಿ ಅಶೋಕ, ಕಥನ ಪ್ರೀತಿ: ಒಂದು ನೂರು ಕನ್ನಡ ಸಣ್ಣ ಕಥೆಗಳ ವಿಶ್ಲೇಷಣೆ, ಅಕ್ಷರ ಪ್ರಕಾಶನ, 2019 (ಎರಡನೇ ಆವೃತ್ತಿ).
4. ಡಿ.ಆರ್. ನಾಗರಾಜ್, ಶಕ್ತಿಶಾರದೆಯ ಮೇಳ, ಅಕ್ಷರ ಪ್ರಕಾಶನ, 2018, (6ನೇ ಆವೃತ್ತಿ).
5. ವಸುಮತಿ ಉಡುಪ, ಅಂತರಂಗದ ಪಿಸುನುಡಿ, ಅಂಕಿತ ಪುಸ್ತಕ, 2021, 2ನೇ ಮುದ್ರಣ.
6. ವೈದೇಹಿ ಕಥೆಗಳು, ಅಕ್ಷರ ಪ್ರಕಾಶನ, 2018 – ಪ್ರಥಮ ಮುದ್ರಣ.
7. ಸುನಂದಾ ಪ್ರಕಾಶ ಕಡಮೆ,  ಗಾಂಧಿಚಿತ್ರದ ನೋಟು, ಅಹರ್ನಿಶಿ ಪ್ರಕಾಶನ, 2019, 2ನೇ ಮುದ್ರಣ.